ಹೊಸ ಕಾರ್ಖಾನೆಗಳಿಗೆ ಲೈಸೆನ್ಸ್ ಕೊಡುವ ಮೊದಲು ಕಾರ್ಮಿಕರಿಗೆ ವಸತಿ ಗೃಹಗಳನ್ನು ಕಟ್ಟಿಸುವ ಬಗ್ಗೆ

೪೫೩. (೧೨೪೯) ಶ್ರೀ ಎಂ. ಮಹದೇವ್ (ನಂಜನಗೂಡು).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

(ಅ) ಕೈಗಾರಿಕೆಗಳಿಗೆ ಪರವಾನಗಿ ಕೊಡುವ ಮೊದಲು ಕಾರ್ಮಿಕರಿಗೆ ವಸತಿ ಗೃಹಗಳನ್ನು ಕಟ್ಟಿಸುವಂತೆ ಕೈಗಾರಿಕೋದ್ಯಮಿಗಳಿಗೆ ಆದೇಶವನ್ನೇನಾದರೂ ಸರಕಾರದವರು ನೀಡಿದ್ದಾರೆಯೇ ?

(ಆ) ಹಾಗಿಲ್ಲದಿದ್ದಲ್ಲಿ ಇನ್ನು ಮುಂದೆ ಕೈಗಾರಿಕೆಗಳಿಗೆ ಪರವಾನಗಿ ಕೊಡುವ ಮೊದಲು ಕಾರ್ಮಿಕರಿಗೆ ವಸತಿ ಗೃಹಗಳನ್ನು ಕಟ್ಟಿಸಿದ ನಂತರ ಪರವಾನಗಿ ಕೊಡುವ ಕ್ರಮವನ್ನು ಸರಕಾರದವರು ಕೈಕೊಳ್ಳುವರೆ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ನೀಡಿಲ್ಲ.

(ಆ) ಆಲೋಚನೆ ಮಾಡುವುದು.

ಮಾನ್ಯ ಅಧ್ಯಕ್ಷರೇ, ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಬಂದಂಥವರಿಗೆ, ಕಾರ್ಮಿಕರಿಗೆ ವಸತಿ ಗೃಹಗಳನ್ನು ಕಟ್ಟಿಸಿದ ನಂತರ ಪರವಾನಗಿ ಕೊಡಬೇಕು ಎಂದು ಹೇಳಿದ್ದಾರೆ. ಕಾರ್ಮಿಕರಿಗೆ ವಸತಿ ಸೌಕರ್ಯ ಬಹಳ ಅವಶ್ಯ. ಆದರೆ ಎಲ್ಲಾ ಉದ್ದಿಮೆಗಳಿಗೆ ಈ ಸಾಮರ್ಥ್ಯ ಇರುವುದಿಲ್ಲ. ಅನೇಕ ಸಲ ಕಾರ್ಮಿಕರು ತಮ್ಮ ಮನೆಯಲ್ಲಿ ಇದ್ದು ಈ ಕೆಲಸಗಳಿಗೆ ಹೋಗತಕ್ಕ ಸಂದರ್ಭಗಳಿವೆ. ಆದರೆ ದೊಡ್ಡ ದೊಡ್ಡ ಕೈಗಾರಿಕೆಗಳು ಎಲ್ಲೆಲ್ಲಿ ಬರುತ್ತಿವೆ, ಅಲ್ಲಿ ಸರ್ಕಾರ ನಿರ್ಣಯ ತೆಗೆದುಕೊಂಡಿದೆ. ಆದುದರಿಂದ ಈ ಬಗ್ಗೆ ವಸತಿ ಸೌಕರ್ಯ ಒದಗಿಸುವ ಬಗ್ಗೆ ವಿಶೇಷವಾಗಿ ಅವರಿಗೆ ಕಾದಿರಿಸತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿದ್ದೇವೆ, ಅವರಿಗೆ ಒತ್ತಾಯ ಮಾಡುತ್ತೇವೆ. ಇದರ ಜೊತೆಗೆ ಸರ್ಕಾರವೂ ಕೂಡ ಕೆಲವು ಕಡೆ ಮನೆಗಳನ್ನು ಕಟ್ಟಿಸಿ ಕೈಗಾರಿಕೆಯವರಿಗೆ ಕೊಡುತ್ತೇವೆ. ಕೈಗಾರಿಕೆ ಮಾಡುವವರು ಕಡ್ಡಾಯವಾಗಿ ವಸತಿ ಸೌಕರ್ಯ ಮಾಡಬೇಕು ಎನ್ನುವುದು ಬಹಳ ಕಷ್ಟ. ಆ ಬಗ್ಗೆ ನಾವು ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಹದೇವ್.—ಈಗ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲೂ ಕೂಡ ಕೈಗಾರಿಕೆ ಬೆಳೆಯುತ್ತಾ ಇದೆ. ಕೆಲವು ಜಿಲ್ಲೆಗಳನ್ನು ಕೈಗಾರಿಕಾ ಹಿಂದುಳಿದ ಪ್ರದೇಶವೆಂದು ಘೋಷಣೆ ಮಾಡಿದ್ದೀರಿ. ಅಂಥಾ ಕಡೆ ಹೊರಗಡೆಯವರು ಜಾಸ್ತಿ ಸಂಖ್ಯೆಯಲ್ಲಿ ಬಂದು ಇಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುತ್ತಿದ್ದಾರೆ. ಇದರಿಂದ ಸೌಕರರ ಸಂಖ್ಯೆಯೂ ಜಾಸ್ತಿಯಾಗಿದೆ. ಇದರಿಂದ ಏನಾಗುತ್ತದೆ ಎಂದರೆ ಅಲ್ಲಿರತಕ್ಕಂಥಾ ಚಿಕ್ಕ ಚಿಕ್ಕ ಮನೆಗಳಿಗೆ ಬೇಡಿಕೆ ಜಾಸ್ತಿ ಬರುತ್ತದೆ. ಇದರಿಂದ ಅಲ್ಲಿ ಮನೆ ಬಾಡಿಗೆಯೂ ಸಹ ಜಾಸ್ತಿಯಾಗಿದೆ. ತಮಗೆ ಹೇಳಬೇಕಾದರೆ ನಂಜನಗೂಡಿನಲ್ಲಿ ೨೦೦-೨೫೦ ರೂಪಾಯಿ ಕೊಟ್ಟಿದ್ದರೆ ದೊಡ್ಡ ಮನೆಯೇ ಬಾಡಿಗೆಗೆ ಸಿಕ್ಕುತ್ತಿತ್ತು. ಈಗ ಅಂಥಾ ಮನೆಗೆ ಒಂದು ಸಾವಿರ ರೂಪಾಯಿ ಕೊಡಬೇಕಾಗುತ್ತದೆ. ಇದರಿಂದ ಏನಾಗಿದೆ ಅಲ್ಲಿಯ ಜನಸಾಮಾನ್ಯರು, ಮಧ್ಯಮವರ್ಗದವರು ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಬಹಳ ತೊಂದರೆಯಾಗಿದೆ. ತಾವು ದೊಡ್ಡ ದೊಡ್ಡ ಕೈಗಾರಿಕೆಗಳವರಿಗೆ ಒಂದು ಸೂಚನೆ ನೀಡಿ ಅದಷ್ಟು ಮನೆಗಳನ್ನು ಎಲ್ಲಾ ಕಾರ್ಮಿಕ ವರ್ಗದವರಿಗೆ ಅಂದರೆ ಒಂದು ಮತ್ತು ಎರಡನೇ ದರ್ಜೆಯ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿಕೊಡುವ ಹಾಗೆ ಸೂಚನೆ ನೀಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ನಾನು ಸ್ವಾಗತಿಸುತ್ತೇನೆ. ಈಗಾಗಲೇ ಎಲ್ಲೆಲ್ಲಿ ಕೈಗಾರಿಕೆಗಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಾರೋ, ಅಲ್ಲಿ ಅದರ ಜೊತೆಗೆ ಕಾರ್ಮಿಕ ವರ್ಗದವರ ವಸತಿಗಳನ್ನೂ ಸಹ ಕಟ್ಟಿಸಿಕೊಡುವ ಹಾಗೆ ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ಈ ಬಗ್ಗೆ ಈಗಾಗಲೇ ಸೂಚನೆ ಕೊಟ್ಟಿದ್ದೇವೆ. ಕೆಲವು ಸಂದರ್ಭದಲ್ಲಿ ಅವರಿಗೆ ಸರಿಯಾದ ಭೂಮಿ ಸಿಕ್ಕುವುದು ಬಹಳ ಕಷ್ಟವಾಗಿದೆ. ಅಲ್ಲಿ ಹೊಸ ಭೂಮಿಯನ್ನು ತೆಗೆದುಕೊಂಡು ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಮಾಡಿಕೊಡುವ ಹಾಗೆ ಈಗಾಗಲೇ ಕಾಯಿದೆಯಲ್ಲಿ ಇದೆ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಯವರು ಈಗಾಗಲೇ ಇದರ ಬಗ್ಗೆ ಸೂಚನೆ ಕೊಟ್ಟಿದ್ದೇವೆ ಎಂದು ಹೇಳಿದರು. ಈ ಬಗ್ಗೆ ನಾನು ಕೇಳುವುದು ಏನೆಂದರೆ ಯಾವ ಯಾವ ಕೈಗಾರಿಕೆಗಳು ಆ ರೀತಿ ಮಾಡಿಕೊಟ್ಟಿದ್ದಾರೆ, ಇದರ ಬಗ್ಗೆ ವಿವರ ಹೇಳುತ್ತೀರಾ?

ಅಧ್ಯಕ್ಷರು.—ತಕ್ಷಣ ಡೀಟೇಲ್ಸ್ ಕೊಡಿ ಎಂದರೆ ಹೇಗೆ ಕೊಡುವುದಕ್ಕಾಗುತ್ತದೆ?

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಇದು ಬಹಳ ಗಹನವಾದ ವಿಚಾರ. ಮನೆಗಳ ಅಭಾವ ಇರುವುದರಿಂದ ನಾನು ಈ ಬಗ್ಗೆ ಒಂದು ಸಲಹೆ ಕೊಡುತ್ತೇನೆ ಏನೆಂದರೆ ಹುಡ್ಕೋ ಸ್ಕೀಂನಲ್ಲಿ, ಇನ್ನಿತರೆ ಹಣಕಾಸಿನ ಸಂಸ್ಥೆಗಳಿಂದ ಆ ಕೈಗಾರಿಕೆಗಳ ಮಾಲೀಕರಿಗೆ ಹಣವನ್ನು ಕೊಡಿಸಿ, ಅವರಿಂದ ಮನೆಗಳನ್ನು ಕಟ್ಟಿಸಿ ಮನೆ ಬಾಡಿಗೆ ಮುಖಾಂತರ ವಾಪಸ್ ತೆಗೆದುಕೊಳ್ಳುವ ಹಾಗೆ ಮಾಡಿದರೆ ಅದರಿಂದ ಹಣವೂ ವಾಪಸ್ಸು ಬರುತ್ತದೆ ಅವರಿಗೆ ಮನೆಗಳೂ ಸಿಕ್ಕಿದ ಹಾಗಾಗುತ್ತದೆ. ಇದರಿಂದ ಅವರಿಗೆ ಅನುಕೂಲವೂ ಆಗುತ್ತದೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಲ್ಲಾ ಸಂಸ್ಥೆಗಳೂ ಹಾಗೆ ಇಟ್ಟುಕೊಂಡಿರುವುದಿಲ್ಲ. ಇದಕ್ಕೆ ಯಾರ್ಯಾರು ಮುಂದೆ ಬರುತ್ತಾರೋ ಆ ವರೆಗೆ ಒತ್ತಾಯ ಮಾಡುತ್ತೇನೆ.

ಶ್ರೀ ಪಿ. ರಾಮದೇವ್.—ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಕಾರ್ಖಾನೆಗಳು ಇಲ್ಲಿ ಬಹಳ ಇವೆ. Government is the biggest employer. ವಸತಿ ಸೌಕರ್ಯದ ಬಗ್ಗೆ ಮುಖ್ಯವಾಗಿ ಸರ್ಕಾರದವರೇ ಪರಿಹಾರ ಮಾಡುವುದಕ್ಕೆ ಸಾಧ್ಯ ಆಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ವರ್ಷೇ ವರ್ಷೇ ಈ ಸಮಸ್ಯೆ ಉಲ್ಬಣವಾಗುತ್ತಿದೆ. ಇದು ಪರಿಹಾರವಾಗುವಂತೆ ಕಾಣುತ್ತಾ ಇಲ್ಲ. ಆದುದರಿಂದ ನಾನು ಸರ್ಕಾರಕ್ಕೆ ಒಂದು ಸೂಚನೆ ಕೊಡುವುದೇನೆಂದರೆ ಇಂಡಸ್ಟ್ರಿಯಲ್ ಹೌಸಿಂಗ್ ಸ್ಕೀಂ ಮತ್ತು ಗೌರ್ಮೆಂಟ್ ಎಂಪ್ಲಾಯಿಸ್ ಹೌಸಿಂಗ್ ಸ್ಕೀಂ ಏನು ಇದೆ ಇದನ್ನು ಸ್ಪಡಿ ಮಾಡಿ ಅವರಿಗೆ ಸರಿಯಾಗಿ ವಸತಿ ಸೌಕರ್ಯವನ್ನು ಒದಗಿಸಿಕೊಡುವುದಕ್ಕೋಸ್ಕರ ಒಂದು ಹೌಸ್ ಸಮಿತಿಯನ್ನು ಮಾಡುವುದಕ್ಕೆ ಸಾಧ್ಯವೇ?

ಶ್ರೀ ಎಸ್. ಆರ್. ಬೊಮ್ಮಾಯಿ.—ಅದು ಒಳ್ಳೆಯ ಸಲಹೆ, ಪರಿಶೀಲನೆ ಮಾಡುತ್ತೇನೆ.

ಶ್ರೀ ಎ. ನಾಗರಾಜ್.—ಕೈಗಾರಿಕೆಗಳ ಪತಿಯಿಂದಲೇ ಕಾರ್ಮಿಕರಿಗೆ ವಸತಿ ಗೃಹಗಳನ್ನು ಕಟ್ಟಿಸಿ ಸರ್ಕಾರದವರು ಅದಕ್ಕೆ ಅನುದಾನ ಕೊಡುವ ರೀತಿ ಇದೆ. ಈಗ ಇದಕ್ಕೆ ಅನುದಾನ ಕೊಡುವುದು ಸ್ವಲ್ಪ ಕಡಿಮೆಯಾಗಿದೆ, ಇದನ್ನು ಹೆಚ್ಚಿಸುವುದನ್ನು ಪರಿಶೀಲನೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಪರಿಶೀಲನೆ ಮಾಡುತ್ತೇನೆ.

ಶ್ರೀ ಎನ್. ಜಿ. ನಾಯಕ್.—ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರ ಬರಗಾಲ ಪೀಡಿತ ಪ್ರದೇಶ. ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದಕ್ಕೆ ಚಿಂತನೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಚಿಂತನೆ ಮಾಡುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಮಂತ್ರಿಗಳು ಎಲ್ಲೆಲ್ಲಿ ಕೈಗಾರಿಕೆಗಳು ಸ್ಥಾಪನೆಯಾಗುತ್ತದೋ ಅಲ್ಲಿ ಕಾರ್ಮಿಕರ ವಸತಿಗಾಗಿ ಸರಿಯಾದ ಜಾಗವನ್ನೂ ಸಹ ಇಡುತ್ತೇವೆ ಎಂದು ಹೇಳಿದರು. ಆದರೆ ಆ ಜಾಗದಲ್ಲಿ ಸರಿಯಾದ ರಸ್ತೆ ಇರುವುದಿಲ್ಲ, ವಿದ್ಯುಚ್ಛಕ್ತಿ ಇರುವುದಿಲ್ಲ, ನೀರು ಇರುವುದಿಲ್ಲ, ಬೇಕಾದಂಥಾ ಸೌಲಭ್ಯಗಳು ಇರುವುದಿಲ್ಲ. ಆದುದರಿಂದ ಸರ್ಕಾರದವರೇ ಕಾರ್ಮಿಕರಿಗಾಗಿ ಮೀಸಲಾತಿ ಜಾಗವನ್ನು ಏನು ಇಟ್ಟಿದ್ದೀರೋ ಆ ಜಾಗದಲ್ಲಿ ತಾವೇ ಸ್ವಂತವಾಗಿ ಕಟ್ಟುವ ಹಾಗೆ ಏನಾದರೂ ಏರ್ಪಾಡು ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ರಸ್ತೆ ಸೌಕರ್ಯ, ವಿದ್ಯುಚ್ಛಕ್ತಿ ಮತ್ತು ನೀರು ಈ ಸೌಲಭ್ಯಗಳನ್ನು ಕೊಡುವುದನ್ನು ಸರ್ಕಾರ ಪರಿಶೀಲನೆ ಮಾಡುತ್ತದೆ. ಆದರೆ ಕಾರ್ಮಿಕರಿಗೆ ಸರ್ಕಾರವೇ ಸ್ವಂತವಾಗಿ ಮನೆಗಳನ್ನು ಕಟ್ಟಿಸಿಕೊಡುವುದು ಕಷ್ಟ. ಏತಕ್ಕೆಂದರೆ ಆ ಕಾರ್ಮಿಕರು ನಿವೃತ್ತರಾದರೆ ಅವರು ಮನೆ ಬಿಡುವುದಿಲ್ಲ ಅಲ್ಲೇ ಉಳಿಯುತ್ತಾರೆ. ಭದ್ರಾವತಿ, ಹುಬ್ಬಳ್ಳಿ ಮತ್ತು ಕೆ. ಐ. ಡಿ. ಬಿ. ಇಲ್ಲಿರುವ ಕಾರ್ಖಾನೆಗಳಲ್ಲಿ ಅವರೇ ಮನೆಗಳನ್ನು ಕಟ್ಟಿಸಿಕೊಟ್ಟರೆ ಅವರು

ನಿವೃತ್ತರಾದ ಮೇಲೆ ಆ ಮನೆಯನ್ನು ವಾಪಸ್ಸು ತೆಗೆದುಕೊಂಡು ಬೇರೆಯವರಿಗೆ ಕೊಡಬಹುದು. ಅವರಿಗೆ ಖಾಯಂ ಆಗಿ ಕೊಟ್ಟರೆ ಅನಾನುಕೂಲವಾಗುತ್ತದೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಮಾನ್ಯ ಮಂತ್ರಿಗಳು ಮಾತನಾಡುತ್ತಾ ದೊಡ್ಡ ಕೈಗಾರಿಕೆಗಳವರು ಅವರ ಕಾರ್ಮಿಕರಿಗೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ತಕ್ಕ ವ್ಯವಸ್ಥೆ ಮಾಡಿದ್ದಾರೆ, ಆದರೆ ಸಣ್ಣ ಸಣ್ಣ ಕೈಗಾರಿಕೆಗಳವರಿಗೆ ಇದು ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳಿದರು. ತಮಗೆ ಹೇಳಬೇಕಾದರೆ ಬೆಂಗಳೂರಿನಲ್ಲಿರತಕ್ಕಂಥಾ ಮೈಕೋ ಆಗಲಿ, ಇಂಡಸ್ಟ್ರಿಯಲ್ ಇನ್‌ಸ್ಟ್ರುಮೆಂಟ್ಸ್ ಕಂಪನಿ ಆಗಲಿ, ಎಸ್. ಕೆ. ಎಫ್. ಆಗಲಿ ಅವರು ಯಾರೂ ಸಹ ಮನೆ ಕಟ್ಟಿಸಿದ ಹಾಗೆ ಕಾಣಲಿಲ್ಲ. ಅವರು ಬೇರೆ ರೀತಿಯಲ್ಲಿ ಅದನ್ನು ಉಪಯೋಗ ಮಾಡಿಕೊಂಡಿದ್ದಾರೆ. ಇದೇ ರೀತಿಯಾಗಿ ಇನ್ನೂ ಕೆಲವು ಕೈಗಾರಿಕೆಗಳವರು ಈ ಬಗ್ಗೆ ಸ್ವಲ್ಪ ಇದ್ದರೂ ಸಹ ಅವರಿಗೆ ಮನೆಯನ್ನು ಕಟ್ಟಿಸಿಕೊಡುವ ಏರ್ಪಾಡು ಮಾಡಿಲ್ಲ. ಆದುದರಿಂದ ಇದನ್ನೆಲ್ಲಾ ಸ್ಪಷ್ಟ ಮಾಡುವುದಕ್ಕೆ ಶ್ರೀ ಮಾನ್ ಪಿ. ರಾಮದೇವ್ ಅವರು ಹೇಳಿದ ಹಾಗೆ ಇದಕ್ಕೆ ಒಂದು ತಜ್ಞರ ಸಮಿತಿ ಮಾಡಿ ಈ ಸಮಸ್ಯೆಯನ್ನು ನೀಗಿಸುವುದಕ್ಕೆ ಪ್ರಯತ್ನ ಮಾಡಬಹುದು. ಕೆಲವರು ಇದರ ಬಗ್ಗೆ ದುಡ್ಡು ತೆಗೆದುಕೊಂಡರೂ ಕೂಡ ಚಾಗ ಇದ್ದರೂ ಕೂಡ ಅದನ್ನು ಬೇರೆ ಯಾವುದಕ್ಕೋ ಉಪಯೋಗಿಸಿಕೊಳ್ಳುತ್ತಾರೆ. ಇದನ್ನೆಲ್ಲಾ ಸ್ಪಷ್ಟ ಮಾಡಬಹುದು. ಹಾಗೆ ಮಾಡುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಅಸ್ತಿತ್ವದಲ್ಲಿರತಕ್ಕಂಥಾ ಕೈಗಾರಿಕೆಗಳವರಿಗೆ ಕೊಟ್ಟಂಥಾ ಜಾಗವನ್ನು ಬೇರೆ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡಿದ್ದರೆ, ಅಂಥಾ ಪ್ರಕರಣಗಳು ಏನಾದರೂ ಇದ್ದರೆ ಅದನ್ನು ನಮಗೆ ತಿಳಿಸಿದರೆ, ಅವರಿಗೆ ಒತ್ತಾಯ ಮಾಡುತ್ತೇವೆ, ಸೂಕ್ತವಾದ ಕ್ರಮ ತೆಗೆದುಕೊಳ್ಳುತ್ತೇವೆ. ಎರಡನೆಯದಾಗಿ ಶ್ರೀ ರಾಮದೇವ್ ಅವರು ಇದರ ಬಗ್ಗೆ ಏನು ಹೇಳಿದ್ದಾರೆ, ಅದನ್ನು ಪರಿಶೀಲಿಸುತ್ತೇನೆ.

ಪ್ರಶ್ನೆ ಳಳಏ (೯೩೮)—ಶ್ರೀ ಎನ್. ಚಿಕ್ಕೇಗೌಡ—ಮಾನ್ಯ ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ ಳಳಖ (೯೪೩)—ಶ್ರೀ ಎಸ್. ಕೆ. ಕಾಂತಾ—ಮಾನ್ಯ ಸದಸ್ಯರು ಹಾಜರಿಲ್ಲ.

ಪ್ರಶ್ನೆ ಳಳಒ (೧೦೫೭)—ಶ್ರೀ ಎಂ. ಮಲ್ಲಪ್ಪ—ಮಾನ್ಯ ಸದಸ್ಯರು ಹಾಜರಿಲ್ಲ.

ಪ್ರಶ್ನೆ ಳಳಂ (೧೨೦೩)—ಶ್ರೀ ಟಿ. ಹೆಚ್ ಹನುಮಂತರಾಯಪ್ಪ—ಮಾನ್ಯ ಸದಸ್ಯರು ಹಾಜರಿಲ್ಲ.

ಪ್ರಶ್ನೆ ಳಳಏ (೧೧೦೯)—ಶ್ರೀ ಉಗ್ರನರಸಿಂಹಪ್ಪ—ಮಾನ್ಯ ಸದಸ್ಯರು ಹಾಜರಿಲ್ಲ.

(ಪ್ರಶ್ನೋತ್ತರ ವೇಳೆ ಮುಗಿಯಿತು)

ಒಬ್ಬ ಸದಸ್ಯರು.—ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರ ಬಂದಿದೆ, ನನ್ನ ಪ್ರಶ್ನೆಯನ್ನು ತೆಗೆದು ಕೊಳ್ಳಲಿಲ್ಲವಲ್ಲಾ.

ಅಧ್ಯಕ್ಷರು.—ನಾನು ಮೊದಲೇ ಆ ಪ್ರಶ್ನೆಯನ್ನು ತಡೆಹಿಡಿದಿದ್ದೇನೆ. ಆಮೇಲೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೇನೆ.

ಶ್ರೀ ಅಬ್ದುಲ್ ನಜೀರ್ ಸಾಬ್.—ಮಾನ್ಯ ಅಧ್ಯಕ್ಷರೇ, ನಾನು ಮೇಲ್ಮನೆಗೆ ಹೋಗಬೇಕಾಗಿರುವುದರಿಂದ ನನ್ನ ಗಮನ ಸೆಳೆಯುವ ಸೂಚನೆಯನ್ನು ಈವಾಗ ತೆಗೆದುಕೊಂಡರೆ ಅನುಕೂಲವಾಗುತ್ತದೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

SRI A. LAKSHMISAGAR (Minister for Law, Parliamentary Affairs and Housing).—Sir, I beg to lay on the table of the House the written answers to questions in Thirtyfirst list.